# ಗುಳೇದಗುಡ್ಡ ತಾಲೂಕಿನ ಸಾಹಿತ್ಯ ಚರಿತೆ

ಚಂದ್ರಶೇಖರ ಹೆಗಡೆ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಬಾದಾಮಿ, ಬಾಗಲಕೋಟೆ.

DOI: https://doi.org/10.5281/zenodo.18008851

## ABSTRACT:

ಗುಳೇದಗುಡ್ಡ ತಾಲೂಕು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಸಾಹಿತ್ಯಿಕವಾಗಿ ಮತ್ತು ಸಾಂಸ್ಕೃತಿಕವಾಗಿ ತನ್ನದೇಯಾದ ಅನನ್ಯತೆಯಿಂದ ಸಮ್ಮಿಳಿತವಾದ ಶ್ರೀಮಂತ ಪರಂಪರೆಯನ್ನು ಹೊಂದಿದೆ. ಈ ಸಾಹಿತ್ಯ ಪರಂಪರೆಯು 16 ನೇ ಶತಮಾನದಲ್ಲಿ ಗುಳೇದಗುಡ್ಡದ ಮುರಿಗೆ ದೇಶೀಕೇಂದ್ರರು ರಚಿಸಿದ ಹಮ್ಮೀರ ಕಾವ್ಯದಿಂದ ಆರಂಭವಾಗಿ ಇತ್ತೀಚಿನ ನವಯುಗದ ಪ್ರಯೋಗಶೀಲ ಕವಿ ಕಾವ್ಯಗಳವರೆಗೂ ಅವ್ಯಾಹತವಾಗಿ ಮುಂದುವರೆಯುತ್ತಿದೆ. ಹಮ್ಮೀರ ಕಾವ್ಯದ ನಂತರ ಈ ಅಧ್ಯಯನವು ಬೇಂದ್ರೆಯವರ ಶಿಷ್ಯರೆಂದೇ ಖ್ಯಾತನಾಮರಾದ ಡಾ. ಎಸ್. ಎಸ್. ಬಸುಪಟ್ಟದರವರಿಂದ ಆರಂಭವಾಗಿ ಅವರ ಶಿಷ್ಯೋತ್ತಮರಾದ ಡಾ. ಮಹಾದೇವ ಕಣವಿ, ಶ್ರೀ ಮಲ್ಲಿಕಾರ್ಜುನ ಬನ್ನಿ, ಡಾ. ಭೀಮನಗೌಡ ಪಾಟೀಲ, ಶ್ರೀ ಅಶೋಕ ಸಮಗಂಡಿ, ಶ್ರೀ ಕೆ. ಎನ್. ಯರಗಾ ಇವರು ರಚಿಸಿರುವ ಮೌಲಿಕ ಕೃತಿಗಳ ಒಳನೋಟಗಳಿಂದ ಮುಂದುವರೆದು, ಡಾ. ರಾಜಶೇಖರ ಬಸುಪಟ್ಟದ, ಡಾ. ವಿ. ಎ. ಬೆನಕನಾಳ, ಶ್ರೀ ಸಿದ್ಧಲಿಂಗಪ್ಪ ಬರಗುಂಡಿ, ಶ್ರೀ ಎಂ.ಪಿ. ನೀಲಕಂಠಮಠ, ಡಾ. ಸಿ. ಎಂ. ಜೋಶಿ ಇವರ ಕೃತಿರತ್ನಗಳ ಒಳಪೊಕ್ಕು ಶೋಧಿಸುವ ಕ್ರಮವನ್ನೊಳಗೊಂಡಿದೆ. ಮುಂದುವರೆದು ಇತ್ತೀಚಿನ ಪ್ರಯೋಗಶೀಲ ಯುಗದ ಕವಿ ಕಾವ್ಯಗಳವರೆಗೂ ಶೋಧನಾ ಕಾರ್ಯ ಆವರಿಸಿಕೊಂಡು ಇಡೀ ಗುಳೇದಗುಡ್ಡ ತಾಲೂಕಿನ ಸಾಹಿತ್ಯಿಕ ಚರಿತ್ರೆ ಹಾಗೂ ಪರಂಪರೆಯನ್ನು ಕಟ್ಟಿಕೊಡುವ ಉದ್ದೇಶವನ್ನು ಹೊಂದಿದೆ.

## KEYWORDS:

ಹಮ್ಮೀರ ಕಾವ್ಯ, ಡಾ. ಎಸ್. ಎಸ್. ಬಸುಪಟ್ಟದ, ಸಾಹಿತ್ಯಿಕ ಚರಿತ್ರೆ, ಪ್ರಯೋಗಶೀಲ ಯುಗ.

**ಪೀಠಿಕೆ:**

ಗುಳೇದಗುಡ್ಡವು, ಆನೆಯಂತೆ ಮಲಗಿ ಊರನ್ನು ರಕ್ಷಿಸುವಂತಿರುವ ಗುಡ್ಡಗಳ ಮಧ್ಯೆ ಮೈಚಾಚಿಕೊಂಡ ಪುಣ್ಯಭೂಮಿ. ಐತಿಹಾಸಿಕವಾಗಿ 'ಗುಳೆ ಬಂದವರ ಗುಡ್ಡ', 'ಗೂಳಿ ತೋರಿದ ಗುಡ್ಡ' ಎಂದು ಕರೆಯಲ್ಪಡುವ ಶ್ರಮಿಕ ಪರಂಪರೆಯ ಬೀಡು. ಸಗರನಾಡಿನ ಅರಸರಿಗೆ ಇದರ ಮೂಲವನ್ನು ಕೊಂಡೊಯ್ಯುವ ವಿದ್ವಾಂಸರ ವಾದವು ಗುಳೇದಗುಡ್ಡದ ಇತಿಹಾಸದ ಸಂಶೋಧನೆಗೆ ನಾಂದಿಯನ್ನು ಹಾಡುತ್ತದೆ. ನೇಕಾರಿಕೆಯನ್ನೇ ಪ್ರಧಾನ ವೃತ್ತಿಯನ್ನಾಗಿ ಹೊಂದಿರುವ ಶ್ರೀಮಂತ ಸಂಸ್ಕೃತಿಯ ನೆಲೆವೀಡು. ಕಾಯಕವೇ ಕೈಲಾಸ ಇಲ್ಲಿಯ ಬೀಜಮಂತ್ರ. ದಾಸೋಹ ಇಲ್ಲಿಯ ಬದುಕಿನ ಸ್ತೋತ್ರ. ಲಕ್ಷಕ್ಕೊಬ್ಬ ಭಕ್ತ ಕೋಟಿಗೊಬ್ಬ ಶರಣ ಎನ್ನುವಂತೆ ಅಪರೂಪಕ್ಕೊಂದು ಊರು ಈ ಗುಳೇದಗುಡ್ಡ. 'ಆರಂಕುಶಮಿಟ್ಟೊಡೆ ನೆನೆವುದೆನ್ನ ಮನಂ ಬನವಾಸಿ ದೇಶಮಂ' ಎಂದು ಆದಿ ಕವಿ ಪಂಪನು ಹಾಡಿದಂತೆ ಇಲ್ಲಿಗೆ ಬಂದವರನ್ನು ಸೆಳೆಯದೇ ಬಿಡುವುದಿಲ್ಲ ಈ ಊರು. ತನ್ನದೇ ಆದ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಪರಂಪರೆಯನ್ನು ಹೊಂದಿರುವ ಗುಳೇದಗುಡ್ಡವು ಈ ಭುವನದಲ್ಲಿಯೇ ಖಣಗಳಿಗೆ ಹೆಸರುವಾಸಿಯಾಗಿರುವ ನೆಲಮೂಲ ಸಂಸ್ಕೃತಿಯ ತವರೂರು. ನೇಯ್ಗೆಯೇ ಪ್ರಧಾನ ಉದ್ಯೋಗವೆಂದ ಮೇಲೆ ಅಪೂರ್ವ ಬದುಕಿನ ನೇಯ್ಗೆಯಿಂದಲೂ ಗಮನಸೆಳೆದಿರುವ ಮಹತ್ವದ ಸ್ಥಳವಿದು. ಜಗತ್ತಿಗೆ ಆರ್ಥಿಕ ಮಿತವ್ಯಯದ

ಪಾಠವನ್ನು ಮಾಡುತ್ತಿರುವ ಗುಳೇದಗುಡ್ಡದ ಐತಿಹಾಸಿಕತೆಯು ಸುಮಾರು ಕ್ರಿ.ಶ. 5 ನೇ ಶತಮಾನದಷ್ಟು ಪ್ರಾಚೀನವಾದುದು. ಇತಿಹಾಸ ಹಾಗೂ ಪರಂಪರೆಗೆ ರೂಪಕದಂತಿರುವ ಈ ಊರಿನ ಸಾಂಸ್ಕೃತಿಕ ಅಧ್ಯಯನವು ಅನನ್ಯತೆಯಿಂದ ಕಂಗೊಳಿಸುತ್ತದೆ. ಕುಪ್ಪಸದ ಖಣಗಳ ನೇಕಾರಿಕೆಯಿಂದ ಜಗದ್ವಿಖ್ಯಾತಿಯನ್ನು ಪಡೆದ ಗುಳೇದಗುಡ್ಡದ ಸಾಂಸ್ಕೃತಿಕ ಅಧ್ಯಯನವನ್ನು ಸ್ಥೂಲವಾಗಿ ಐತಿಹಾಸಿಕ, ಭೌಗೋಳಿಕ, ಸಾಹಿತ್ಯಿಕ, ರಂಗಪರಂಪರೆ, ಸಾಮಾಜಿಕ, ಧಾರ್ಮಿಕ ಎಂದು ವಿಭಾಗಿಸಬಹುದು. ಈ ವೈಧಾನಿಕತೆಯ ಮಾದರಿಯನ್ನಿಟ್ಟುಕೊಂಡು ಗುಳೇದಗುಡ್ಡದ ಸಾಂಸ್ಕೃತಿಕ ಹಿರಿಮೆಯನ್ನು ಈ ಕೆಳಗಿನಂತೆ ಕಟ್ಟಿಕೊಡಬಹುದು.

**ಐತಿಹಾಸಿಕ ಹಿನ್ನೆಲೆ:**

ಗುಳೇದಗುಡ್ಡದ ಇತಿಹಾಸವನ್ನು ಚಾಲುಕ್ಯರ ಕಾಲದಿಂದಲೂ ಅಧಿಕೃತವಾಗಿ ಆರಂಭಿಸಬಹುದಾದರೂ ಇದಕ್ಕೆ ಪೂರಕವಾದ ದಾಖಲೆಗಳು ಲಭ್ಯವಿಲ್ಲದ ಕಾರಣ ನಗರದ ಇತಿಹಾಸವು ಅಧಿಕೃತವಾಗಿ ಮಧ್ಯಕಾಲೀನ ಯುಗಕ್ಕೆ ಪಲ್ಲಟಗೊಂಡಿರುವ ಕಾರಣಗಳನ್ನು ಶೋಧಿಸಬೇಕಾಗಿದೆ. ಕ್ರಿ.ಶ. 1540 ರಿಂದ ಗುಳೇದಗುಡ್ಡದ ದಾಖಲೆಸಹಿತದ ಅಧಿಕೃತ ಇತಿಹಾಸವನ್ನು ಸಂಶೋಧಕರು ದಾಖಲಿಸಿರುವುದು ಗಮನಾರ್ಹವಾಗಿದೆ. ಬಿಜಾಪುರ (ಈಗಿನ ವಿಜಯಪುರ)ದ ಎರಡನೇ ಇಬ್ರಾಹಿಂ ಆದಿಲ್‌ಶಾಹನ ಕಾಲದಲ್ಲಿ ಬೆಟ್ಟದ ಮೇಲೆ ಕೋಟೆಯನ್ನು ನಿರ್ಮಿಸಿದ್ದು, ಈಗಲೂ ಕೋಟೆಯ ಅವಶೇಷಗಳು ಕೋಟೆಕಲ್ಲಿನ ಬೆಟ್ಟದ ಮೇಲೆ ಕಾಣಸಿಗುತ್ತವೆ. ಇಲ್ಲಿ ಕ್ರಿ.ಶ. 1706 ರಲ್ಲಿ ಒಂದು ವಿಶಾಲವಾದ ಸುಂದರ ಜಲಾಶಯವನ್ನು ನಿರ್ಮಾಣ ಮಾಡಿರುವುದು ಈ ಪ್ರದೇಶದಲ್ಲಿ ನೀರಾವರಿ ಹಾಗೂ ಕೃಷಿ ಸಂಸ್ಕೃತಿಯು ನೆಲೆಯೂರಲು ಸಹಾಯಕವಾಯಿತು. ಅಲ್ಲಿಂದ ಜನವಸತಿಯ ಪ್ರದೇಶವು ವಿಸ್ತಾರವಾಗುತ್ತಾ ಊರು ವಿಶಾಲವಾದ ಹರವನ್ನು ಪಡೆದುಕೊಳ್ಳುತ್ತಾ ಸಾಗಿರುವುದನ್ನು ಗುರುತಿಸಬಹುದಾಗಿದೆ. ಹೀಗೆ ಸಮೃದ್ಧಿಯತ್ತ ಸಾಗಿದ ಗುಳೇದಗುಡ್ಡವು ಕ್ರಿ.ಶ. 1750 ರಲ್ಲಿ ಮೊದಲ ಬಾರಿಗೆ ಲೂಟಿಕೋರರ ದಾಳಿಗೆ ಒಳಗಾಗಿದ್ದು ಇಲ್ಲಿನ ಆರ್ಥಿಕತೆಗೆ ಪ್ರಬಲವಾದ ಪೆಟ್ಟನ್ನು ನೀಡಿತು. ಕ್ರಿ. ಶ. 1787 ರಲ್ಲಿ ಟಿಪ್ಪುವಿನ ಆಡಳಿತಕ್ಕೆ ಒಳಪಟ್ಟು ನಂತರ ಮರಾಠ ಪೇಶ್ವೆಗಳಿಂದಲೂ ದಾಳಿಗೊಳಗಾಗಿದ್ದು, ಊರಿನ ಅಂದಿನ ಸಮೃದ್ಧ ಸ್ಥಿತಿಯನ್ನು ಸೂಚಿಸುತ್ತದೆ. ಪದೇ ಪದೇ ದರೋಡೆಕೋರರಿಂದ ಆಕ್ರಮಣಕ್ಕೀಡಾದ ಈ ಪ್ರದೇಶದ ಜನರು ಹತಾಶರಾಗಿ ಈ ದುರಂತಗಳಿಂದ ತಪ್ಪಿಸಿಕೊಳ್ಳಲು ಗುಳೆ ಹೊರಡಲು ಅನುವಾದರು. ಜನರ ಈ ದುಸ್ಥಿತಿಯನ್ನು ಕಂಡ ದೇಸಾಯಿಯವರು ಜನರಿಗೆ ಬೆಂಬಲವಾಗಿ ನಿಂತು ಆಶ್ರಯವನ್ನು ಕೊಟ್ಟರು. ಇನ್ನೇನು ಊರಿಗೆ ಎದುರಾದ ಸಂಕಟಗಳೆಲ್ಲವೂ ಕೊನೆಗೊಂಡವು ಎಂದು ಜನರು ನೆಮ್ಮದಿಯ ನಿಟ್ಟುಸಿರು ಬಿಡುವ ಮುನ್ನವೇ ಕ್ರಿ.ಶ. 1818 ರ ಸಂದರ್ಭದಲ್ಲಿ ಗ್ರಾಮವು ಮತ್ತೆ ಲೂಟಿಗೆ ಒಳಗಾಗಬೇಕಾಗಿ ಬಂದಾಗ ಜನರು ಆಘಾತವನ್ನನುಭವಿಸಿದರು. ಈ ಬಾರಿ ಬೇಸತ್ತು ಊರು ಬಿಟ್ಟು ಹೋಗುತ್ತಿರುವ ಜನರನ್ನು ತಡೆಯಲು ದೇಸಾಯಿಯವರು ಬ್ರಿಟಿಷ್ ಅಧಿಕಾರಿಯಾಗಿದ್ದ ಜನರಲ್ ಮನ್ರೋನ ಸಹಾಯವನ್ನು ಯಾಚಿಸಿದರು. ತತ್ಪರಿಣಾಮವಾಗಿ ಗುಳೆ ಹೊರಟವರು ಮರಳಿ ನೆಲೆನಿಂತ ನೆಲವಾಗಿ ಗುಳೇದಗುಡ್ಡ ಎಂಬ ನಾಮಧೇಯವನ್ನು ಹೊತ್ತು ನಾಡಿನಲ್ಲಿ ಚಂದ್ರನಂತೆ ಬೆಳಗುತ್ತಿರುವುದು ಹೆಮ್ಮೆಯ ಸಂಗತಿ. ಕೋಟೆಕಲ್ಲ ಮಠದ ಗೂಳಿಯೊಂದು ನಿತ್ಯವೂ ಗುಡ್ಡದ ಮೇಲೆ ಮೇಯುವುದಕ್ಕೆ ಹೊರಡುವುದನ್ನು ಕಂಡ ಜನರು 'ಗೂಳಿ ಗುಡ್ಡ' ಎಂದು ಹೆಸರನ್ನು ಕೊಟ್ಟಿರಬೇಕು ಅದೇ ಮುಂದೆ ಜನರ ಆಡುನುಡಿಯಲ್ಲಿ ಗುಳೇದಗುಡ್ಡವೆಂದು ಬದಲಾಗಿರಬೇಕು ಎಂಬ ಐತಿಹ್ಯವಿದೆ.

**ಗುಳೇದಗುಡ್ಡ ತಾಲೂಕಿನ ಸಾಹಿತ್ಯ ಚರಿತೆ:**

ಗುಳೇದಗುಡ್ಡ ತಾಲೂಕಿನ ಸಾಹಿತ್ಯ ಚರಿತೆಯ ಅಧಿಕೃತ ಆರಂಭವಾಗುವುದು ಕ್ರಿ.

ಶ. 1540 ರಲ್ಲಿ ರಚನೆಯಾದ ಹಮ್ಮೀರ ಕಾವ್ಯದಿಂದ. ಇದು ತಾಲೂಕಿನ ಸಾಹಿತ್ಯ ಚರಿತ್ರೆಗೆ ಸಂಬಂಧಿಸಿದ ಮೊತ್ತಮೊದಲ ಉಪಲಬ್ಧ ಗ್ರಂಥವಾಗಿದೆ. ಈ ಕೃತಿಯನ್ನು ಗುಳೇದಗುಡ್ಡದ ಮುರಿಗೆಯ ಶಾಂತವೀರೇಶರ ಶಿಷ್ಯರಾದ ಮುರಿಗೆ ದೇಶೀಕೇಂದ್ರರು ರಚಿಸಿದ್ದಾರೆ ಎಂಬುದು ವಿದ್ವಾಂಸರ ಸಂಶೋಧನೆಯಾಗಿದೆ. ಹಮ್ಮೀರ ಕಾವ್ಯಕ್ಕೆ 'ರಾಜೇಂದ್ರ ವಿಜಯ' ಎಂಬ ಹೆಸರೂ ಇದ್ದು, ಇದೊಂದು ಪ್ರೌಢ ಚಂಪೂ ಕಾವ್ಯವಾಗಿದೆ. ಈ ಕಾವ್ಯದಲ್ಲಿ ಮಲಪ್ರಭಾ ನದಿಯ ರಮ್ಯ ವರ್ಣನೆ, ಪಟ್ಟದಕಲ್ಲಿನ ಸುತ್ತಮುತ್ತಲಿನ ಸ್ಥಳಗಳ ಬಣ್ಣನೆ, ಚಾಲುಕ್ಯರ ಘನತೆ ಹಾಗೂ ಶಿಲ್ಪಕಲಾ ವೈಭವವನ್ನು ಬಿತ್ತರಿಸುವ ಊರುಗಳ ನಿರ್ದೇಶನವು ಉಲ್ಲೇಖಗೊಂಡಿರುವುದರಿಂದ ಈ ಕಾವ್ಯಕ್ಕೆ ಐತಿಹಾಸಿಕವಾದ ಮಹತಿಯೊದಗಿದೆ.

**ವಸುಧೀಶಂ ಮನುರಾಜಂ**
**ರಸಿಕಂ ರಾಜೇಂದ್ರನಮಳ ಹಮ್ಮೀರನೆನಿ**
**ಪ್ಪಸದೃಶತರ ನಾಮಂಗಳ್**
**ಪಸರಿಸುಗುಂ ವೀರರಾಜ ವಿಜಯನೊಳವನೀಶಂ**

ಎಂದು ರಾಜೇಂದ್ರನ ಶಿವಭಕ್ತಿಯ ಪಾರಮ್ಯವನ್ನು ಎತ್ತಿ ತೋರುವುದೇ ಈ ಕಾವ್ಯದ ಘನೋದ್ದೇಶವಾಗಿದೆ. ಅನಿಮಿಷದೇವನು ಅಲ್ಲಮಪ್ರಭುವಿಗೆ ಲಿಂಗದೀಕ್ಷೆಯನ್ನು ನೀಡಿದ ಗುರುವಾಗಿದ್ದಾನೆ. ಈ ಕಾವ್ಯದಲ್ಲಿ ಅಲ್ಲಮಪ್ರಭು, ಸಿದ್ಧರಾಮ, ಗೊಗ್ಗಯ್ಯ ಮುಂತಾದ ಶಿವಶರಣರಿಗೆ ಕಥೆಯನ್ನು ಸಂಗ್ರಹಿಸಿ ಹೇಳಿದಂತೆ ನಿರೂಪಿಸಲಾಗಿದೆ. ಈ ಕಾವ್ಯಕ್ಕೆ 15 ನೇ ಶತಮಾನದ ಸಿಂಗಿರಾಜನ 'ಸಿಂಗಿರಾಜ ಪುರಾಣ' ಕಾವ್ಯವು ಆಕರ ಗ್ರಂಥವಾಗಿದ್ದು ಇದು ಗುಳೇದಗುಡ್ಡ ತಾಲೂಕಿಗೆ ಸಂಬಂಧಿಸಿದ ಅನೇಕ ಐತಿಹಾಸಿಕ ಸಂಗತಿಗಳಿಗೆ ದಾಖಲೆಯನ್ನೊದಗಿಸುವ ಅಪೂರ್ವ ಗ್ರಂಥವಾಗಿದೆ. ಹೀಗೆ 16 ನೆಯ ಶತಮಾನದಿಂದ ಆರಂಭವಾದ ಗುಳೇದಗುಡ್ಡವನ್ನು ಒಳಗೊಂಡ ಅಖಂಡ ಬದಾಮಿ ತಾಲೂಕಿನ ಕನ್ನಡ ಸಾಹಿತ್ಯದ ಇತಿಹಾಸವು ನವೋದಯ ಚಳುವಳಿಯವರೆಗೆ ಕತ್ತಲೆಯ ಯುಗವನ್ನನುಭವಿಸಿದರೂ, ಇದನ್ನು ಮರೆಸುವಂತಹ ಈ ಭಾಗದ ಪ್ರಖ್ಯಾತ ಕಾದಂಬರಿಕಾರರಾದ ಕೆರೂರು ವಾಸುದೇವಾಚಾರ್ಯರು, ಕಥೆಗಾರರೂ ಕಾದಂಬರಿಕಾರರೂ ಆದ ಬಿಂದುಮಾಧವ ಕುಲಕರ್ಣಿಯವರು, ಜಾನಪದ ತಜ್ಞರಾದ ಡಾ. ಬಿ.ಎಸ್. ಗದ್ದಗಿಮಠರವರಂತಹ ಮೇರು ಸಾಹಿತ್ಯ ಪ್ರತಿಭೆಗಳ ಬೆಳಕು ನವೋದಯ ಸಾಹಿತ್ಯ ಚಳುವಳಿಯನ್ನು ಆವರಿಸಿಕೊಂಡು ಮಹತ್ವದ ಪಾತ್ರವನ್ನು ವಹಿಸಿರುವುದು ಗಮನಾರ್ಹ ಸಂಗತಿಯಾಗಿದೆ.

ಗುಳೇದಗುಡ್ಡದಲ್ಲಿಯೇ ಹುಟ್ಟಿ ಬೆಳೆದು ಬೇಂದ್ರೆಯವರ ಶಿಷ್ಯರೆಂದೇ ಹೆಸರುವಾಸಿಯಾದ ಡಾ. ಎಸ್. ಎಸ್. ಬಸುಪಟ್ಟದರವರು ನವೋದಯ, ಪ್ರಗತಿಶೀಲ, ನವ್ಯ ಹಾಗೂ ದಲಿತ ಬಂಡಾಯ ಸಾಹಿತ್ಯ ಚಳುವಳಿಗಳ ಜೀವಸತ್ವವನ್ನು ಭೇದಭಾವವಿಲ್ಲದೇ ಹೀರಿ ಬೆಳೆದು ಉತ್ತುಂಗಕ್ಕೇರಿದವರು. ಶಿವರಾಮ ಕಾರಂತ, ರಂ. ಶ್ರೀ. ಮುಗಳಿ, ಡಿ. ಎಸ್. ಕರ್ಕಿ, ಎಸ್. ಎಸ್. ಭೂಸನೂರಮಠ, ಚೆನ್ನವೀರ ಕಣವಿಯವರಂತಹ ಸಾಹಿತ್ಯ ದಿಗ್ಗಜರ ಜೊತೆ ಜೊತೆಯಾಗಿ ಸಾಗುತ್ತಲೇ ಬಸುಪಟ್ಟದರವರು ತಾವು ನೆಟ್ಟ ಕಾವ್ಯ ಮರಗಳ ರಸ ಸೌಂದರ್ಯವನ್ನು ನಾಡಿಗೆ ಹಂಚುತ್ತಲೇ ನಾಡದೇವಿಗೆ ಸಮೃದ್ಧ ಪರಂಪರೆಯ ಕೊಡುಗೆಯನ್ನು ನೀಡಿದರು. 'ವೀಣಾನಾದ', 'ರತ್ನದೀಪ', 'ವೈಜಯಂತಿ', 'ಸತ್ತವರು ನಾವಲ್ಲ', 'ಚೈತ್ರಾಗಮನ', 'ನಿಜಗುಣ ಶಿವಯೋಗಿಗಳು: ಜೀವನ ಮತ್ತು ಕೃತಿಗಳು', ಮುಂತಾದ ಕೃತಿಗಳು ಇವರ ದಣಿವರಿಯದ ಲೇಖನಿಯಿಂದ ನದಿಯಾಗಿ ಹರಿದಿವೆ. ಹೊಳೆಯಂತೆ ಸಹೃದಯರ ಬತ್ತಿದೆದೆಗಳಿಗೆ ಜೀವ ಸೆಲೆಯನ್ನು ಉಣಿಸುತ್ತಾ ಆತ್ಮಾನಂದದ ಹಸಿರ ಉಸಿರನ್ನು ನೀಡಿ ಕಂಗೊಳಿಸಿವೆ.

**"ತುಂಬು ಹೊಳೆ ತಾ ಹರಿದು ದೂರ ದೂರದಲಿರುವ**

**ಎರಡು ದಡಗಳನಿಲ್ಲಿ ಕೂಡಿಸುತಲಿಹುದು;**
**ಎರಡೆಲ್ಲ ಒಂದಾಗಿ ನಿಂದಿರಲಿ ಬಾಳಿನಲಿ**
**ಎಂಬ ನುಡಿಯನು ಇಳೆಗೆ ಊಡಿಸುತಲಿಹುದು"**

**(ಹೊಳೆ– ಚೈತ್ರಾಗಮನ)**

ಡಾ. ಎಸ್.ಎಸ್. ಬಸುಪಟ್ಟದರವರ ಶಿಷ್ಯರಾದ ಡಾ. ಮಹಾದೇವ ಕಣವಿಯವರು ಗುಳೇದಗುಡ್ಡದ ಸಾಂಸ್ಕೃತಿಕ ಲೋಕದ ಮತ್ತೊಂದು ಸಾಕ್ಷಿ ಪ್ರಜ್ಞೆಯಾಗಿದ್ದವರು. ಕಾವ್ಯ, ಕಥೆ, ನಾಟಕ, ಕಾದಂಬರಿ ಮತ್ತು ವಿಮರ್ಶೆಯ ಕ್ಷೇತ್ರಗಳಲ್ಲಿ ಹುಲುಸಾದ ಸಾಹಿತ್ಯಕೃಷಿಗೈದರು. ಮುಟ್ಟಲಮುರಕಿ, ಕಲ್ಕಿ, ತಾಯಿಬೇರು, ದೇವರ ಹೆಸರಿನ ಮೇಲೆ ಪ್ರಮಾಣ ಮಾಡಿ, ಗ್ರಾಮೀಣ ಸಂವೇದನೆ, ನಿಮ್ಮೊಡನೆ ಮುಂತಾದ ಇವರ ಕೃತಿಗಳು ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿವೆ. 'ಕನ್ನಡದ ಪ್ರಾತಿನಿಧಿಕ ಪ್ರಾದೇಶಿಕ ಕಾದಂಬರಿಗಳು' ಎಂಬುದು ಕಣವಿಯವರು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡಕ್ಕೆ ಸಲ್ಲಿಸಿದ ಪಿ.ಎಚ್. ಡಿ. ಮಹಾಪ್ರಬಂಧವಾಗಿದೆ.

**ಇವಳು ಮುಟ್ಟಲ ಮುರುಕಿಯಂತೆ**
**ಹಿಡಿಯ ಹೋದರೆ ನಾಚಿ ನೀರಾಗಿ**
**ದೂರ ದೂರಕ್ಕೆ ಓಡುತ್ತಾಳೆ**
**ಸಿಕ್ಕರೂ ಬಟ್ಟೆ ಬಣಜಿಗನಂತೆ**
**ಪಟ್ಟು ಹಿಡಿದು ಮೈಮುದುರುತ್ತಾಳೆ**

**('ಮುಟ್ಟಲ ಮುರಕಿ')**

ಡಾ. ಮಹಾದೇವ ಕಣವಿಯವರ ಕಾವ್ಯಕ್ಕೆ ಅನ್ವರ್ಥಕದಂತಿರುವ ಮೇಲಿನ ಸಾಲುಗಳು ಬೆಳಗಾವಿ ಜಿಲ್ಲೆಯಲ್ಲಿ ಜನಿಸಿ ಗುಳೇದಗುಡ್ಡದ ಭಂಡಾರಿ ವ ರಾಠಿ ಮಹಾವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ವೃತ್ತಿಯನ್ನು ಆರಂಭಿಸಿದ ಕಣವಿಯವರ ಬದುಕನ್ನು ಸ್ವಗತವಾಗಿ ಹಾಡಿದಂತಿವೆ.

ಗುಳೇದಗುಡ್ಡ ಸಾಂಸ್ಕೃತಿಕ ವಲಯದ ಮತ್ತೊಂದು ಆಧಾರ ಸ್ತಂಭವೆಂದರೆ ಶ್ರೀ ಮಲ್ಲಿಕಾರ್ಜುನ ಬನ್ನಿಯವರು. ಪ್ರಸಕ್ತ ವರ್ಷ ತಮ್ಮ ಜನ್ಮದಿನದ ಅಮೃತಮಹೋತ್ಸವವನ್ನು ಆಚರಿಸಿಕೊಳ್ಳುತ್ತಿರುವ ಬನ್ನಿಯವರು 1983 ರಲ್ಲಿ ಶಾಸಕರಾಗಿ ಆಯ್ಕೆಯಾಗಿ, 1986 ರಲ್ಲಿ ಪ್ರಗತಿಪರ ಶಿಕ್ಷಣ ಸಂಸ್ಥೆಯ ಚೇರಮನ್ನರಾಗಿ ಸಲ್ಲಿಸಿದ ಸಾಮಾಜಿಕ ಹಾಗೂ ರಾಜಕೀಯ ಸೇವೆ ಜನಪರವಾದುದು. ಸುಮಾರು ಇಪ್ಪತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿ ಕನ್ನಡ ಸಾರಸ್ವತ ಲೋಕಕ್ಕೆ ಕೊಡುಗೆಯಾಗಿ ಕೊಟ್ಟ ಬನ್ನಿಯವರು ಕನ್ನಡ ಲೇಖಕರ ಒಕ್ಕೂಟದ ಮೂಲಕ ಈ ಭಾಗದ ಲೇಖಕರನ್ನು ಪ್ರೋತ್ಸಾಹಿಸಿ ಗೌರವಿಸುವ ಮಹತ್ಕಾರ್ಯವನ್ನು ತಮ್ಮ ಬಳಗದವರೊಡಗೂಡಿ ಮಾಡಿದುದು ದಾಖಲಾರ್ಹ ಸಂಗತಿ. ಆರತಿ, ಒಡಲಾಳದ ಬೆಂಕಿ, ಸತ್ಯಪ್ಪನ ಸಾವಿನ ಸುತ್ತ, ಏಳು ಮಲ್ಲಿಗೆ, ನಿರಂತರ, ಕನಸುಗಳು ಮಾರಾಟಕ್ಕಿವೆ ಮೊದಲಾದ ಕವನಸಂಕಲನಗಳನ್ನು ರಚಿಸಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಸಂಘಟನೆಯಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದರು. ಮೀನಾಕ್ಷಿ ಬೆಳಗಲ್ಲ, ಶಾಂತಾ ಕರಡಿಗುಡ್ಡರವರು ಗುಳೇದಗುಡ್ಡ ತಾಲೂಕಿನ ಕಾವ್ಯಕ್ಷೇತ್ರವನ್ನು ತಮ್ಮ ಕೃತಿಗಳಿಂದ ಹಸಿರುಗೊಳಿಸಿದ್ದಾರೆ.

ಬಾಗಲಕೋಟೆಯಲ್ಲಿ ಜನಿಸಿ, ಅಮೀನಗಡದಲ್ಲಿ ಬಾಲ್ಯವನ್ನು ಕಳೆದು ಗುಳೇದಗುಡ್ಡದ ಬಾಲಿಕೆಯರ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಕರ್ತವ್ಯವನ್ನು ನಿರ್ವಹಿಸಿರುವ ದಿ. ಅಬ್ಬಾಸ್ ಮೇಲಿನಮನಿಯವರು ಈ ನಾಡು ಕಂಡ ಶ್ರೇಷ್ಠ ಕತೆಗಾರರಲ್ಲಿ

ಪ್ರಮುಖರಾದವರು. ಗುಳೇದಗುಡ್ಡವನ್ನೇ ಜೀವಂತ ಸೆಲೆಯಾಗಿಟ್ಟುಕೊಂಡು ಸಣ್ಣ ಕಥೆಗಳಲ್ಲಿ ಮೌಲಿಕ ಕೃಷಿಯನ್ನು ಗೈದ ಅಪರೂಪದ ಬರಹಗಾರರು. ಕಥೆಯಾದಳು ಹುಡುಗಿ, ಭಾವೈಕ್ಯ ಬಂಧ ಎಂಬ ಕವನಸಂಕಲನಗಳು, ಕಣ್ಣ ಮುಂದಿನ ಕಥೆ, ಅರ್ಧ ಸತ್ಯಗಳು, ಮತ್ತೊಂದು ಕರ್ಬಲಾ ಎಂಬ ಕಥಾಸಂಕಲನಗಳು, ಸೌಹಾರ್ದ ಸಂಸ್ಕೃತಿ ಎಂಬ ಲೇಖನ ಸಂಕಲನಗಳು ಸೇರಿದಂತೆ ಇವರ ಸಾಹಿತ್ಯದ ಅಂತರಾತ್ಮ ನೆಲಮೂಲ ಸಂಸ್ಕೃತಿಯಿಂದಲೇ ಜೀವ ತಳೆದಿರುವುದು ಸಹಜವೇ ಆಗಿದೆ. ಗುಳೇದಗುಡ್ಡ ತಾಲೂಕಿನಲ್ಲಿ ಹುಟ್ಟಿದ ಸಣ್ಣಕಥೆಗಳ ಗಂಗೋತ್ರಿ ಅಬ್ಬಾಸ ಮೇಲಿನಮನಿಯವರು. ಇವರ ಕಥೆಗಳು ಕಾಲ್ಪನಿಕ ಪ್ರಪಂಚವನ್ನು ನೆಚ್ಚಿಕೊಳ್ಳದೇ ವಾಸ್ತವಿಕ ಬದುಕಿನ ಅನುಭವಜನ್ಯ ಲೋಕವ್ಯಾಪಾರದಲ್ಲಿ ಅಪಾರವಾದ ನಂಬಿಕೆಯಿಟ್ಟಿವೆ.

ಗುಳೇದಗುಡ್ಡ ತಾಲೂಕಿನ ಹಂಗರಗಿಯವರಾದ ಡಾ. ಮಲ್ಲಿಕಾ ಘಂಟಿಯವರು ತುಳಿಯದಿರಿ ನನ್ನ, ಹೆಣ್ಣುಗಳೇ ಹೀಗೆ, ದಫನ್, ಒಂದು ಬಾವಿಯ ಸುತ್ತ ಎಂಬ ಮೊದಲಾದ ಕೃತಿಗಳನ್ನು ರಚಿಸಿ ತಾಲೂಕಿನ ಮಹಿಳಾ ಸಂವೇದನಾಶೀಲ ಲೇಖಕಿಯರಾಗಿ ಗುರುತಿಸಿಕೊಂಡಿದ್ದಾರೆ. ಅಲ್ಲದೇ ಇವರು ಕನ್ನಡ ವಿಶ್ವವಿದ್ಯಾಲಯ ಹಂಪೆಯ ಮೊದಲ ಮಹಿಳಾ ಕುಲಪತಿಯಾಗಿ ಸೇವೆಯನ್ನು ಸಲ್ಲಿಸಿ ನಿವೃತ್ತರಾಗಿದ್ದಾರೆ. ಗುಳೇದಗುಡ್ಡದ ಭಂಡಾರಿ ವ ರಾಠಿ ಮಹಾವಿದ್ಯಾಲಯದಲ್ಲಿ ಕನ್ನಡದ ಪ್ರಾಧ್ಯಾಪಕರಾಗಿ ಸೇವೆಯನ್ನು ಸಲ್ಲಿಸಿ ನಿವೃತ್ತರಾಗಿರುವ ಪ್ರೊ. ಜಿ. ಜಿ. ಹೂಗಾರರವರು 'ನನ್ನವರು' ಕವನ ಸಂಕಲನವನ್ನು ರಚಿಸಿದ್ದಾರೆ. ನಾಡಿನ ಅಪರೂಪದ ಪತ್ರಕರ್ತರಾಗಿ ಹೆಸರಾದ ದಿ. ಅಶೋಕ ಸಮಗಂಡಿಯವರು ಲಾವಾರಸ, ದವನ, ನಿನ್ನ ನೆನಪುಗಳು ಎಂಬ ಚುಟುಕು ಹನಿಗವನ ಸಂಕಲನಗಳನ್ನು ಪ್ರಕಟಿಸಿ ತಾಲೂಕಿನ ಚುಟುಕು ಸಾಹಿತ್ಯಕ್ಕೆ ಕೊಡುಗೆಯನ್ನು ಸಲ್ಲಿಸಿದ್ದಾರೆ.

ಕೆ.ಎನ್. ಯರಗಾರವರು ಕೆಎನ್‌ನ ಕವಿತೆಗಳು, ಅಧಿಕಾರ, ಗುರುವಿನ ಗದ್ಲ, ದಿನಸಿ ಅಂಗಡಿ ಹುಡುಗ ಎಂಬ ಕೃತಿಗಳನ್ನು ರಚಿಸಿದ್ದಾರೆ. ಚಿತ್ರಕಲಾ ಶಿಕ್ಷಕರಾಗಿ ಸೇವೆಯನ್ನು ಸಲ್ಲಿಸಿ ಸದ್ಯ ನಿವೃತ್ತರಾಗಿರುವ ಶ್ರೀ ಮಹದೇವ ಜಗತಾಪರವರು 'ಉತ್ತರ ಕರ್ನಾಟಕದ ಭಿತ್ತಿ ಚಿತ್ರಗಳು ಹಾಗೂ ಜನಪದ ಶಿಲ್ಪಗಳು, ಪ್ರಾಚೀನ ಚಿತ್ತಾರಗಳು, ಕಸೂತಿ ಕಲೆಯನ್ನು ಕುರಿತ ಸಂಶೋಧನಾತ್ಮಕ ಲೇಖನಗಳನ್ನು ಪ್ರಕಟಿಸಿ ಇತಿಹಾಸಕಾರರಾಗಿ, ಸಂಶೋಧಕರಾಗಿ, ವಿಮರ್ಶಕರಾಗಿ, ಚಿತ್ರಕಲಾವಿದರಾಗಿ ಹೆಸರುವಾಸಿಯಾಗಿದ್ದಾರೆ. ಡಾ. ಸುಭಾಸ ಪೋರೆಯವರು 'ಜಿ.ಎಸ್. ಶಿವರುದ್ರಪ್ಪನವರ ಸಾಹಿತ್ಯ : ಒಂದು ಅಧ್ಯಯನ' ಎಂಬ ಸಂಶೋಧನಾ ಕೃತಿಯನ್ನು ರಚಿಸಿರುವುದಲ್ಲದೇ ಕವನಸಂಕಲನಗಳನ್ನೂ ಪ್ರಕಟಿಸಿದ್ದಾರೆ. ಗುಳೇದಗುಡ್ಡದ ಭಂಡಾರಿ ವ ರಾಠಿ ಮಹಾವಿದ್ಯಾಲಯದಲ್ಲಿ ಶಿಕ್ಷಣಶಾಸ್ತ್ರದ ಪ್ರಾಧ್ಯಾಪಕರಾಗಿ ಹಾಗೂ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರಾಗಿ ಸೇವೆಯನ್ನು ಸಲ್ಲಿಸಿ ಸದ್ಯ ನಿವೃತ್ತರಾಗಿರುವ ಡಾ. ವಿ. ಎ. ಬೆನಕನಾಳರವರು ನಮ್ಮೊಳಗಿನ ಗಾಂಧಿ, ಫ. ಗು. ಹಳಕಟ್ಟಿಯವರ ಅಧ್ಯಯನ, ಕಲ್ಯಾಣವೆಂಬುದು ಮತ್ತೆಲ್ಲಿಹುದು, ಸುವಿಚಾರ ಸುಧೆ, ಡಾ. ಬಿ. ಆರ್. ಅಂಬೇಡ್ಕರ್ ಬದುಕಿನ ನಿಷ್ಠಾತ್ರಯಗಳು, ಗುಳೇದಗುಡ್ಡದ ಮೇಳಗಳು ಎಂಬ ಕೃತಿಗಳನ್ನು ರಚಿಸಿ ಕನ್ನಡ ಸಾರಸ್ವತ ಲೋಕಕ್ಕೆ ವಿಶಿಷ್ಟವಾದ ಸೇವೆಯನ್ನು ಸಲ್ಲಿಸಿದ್ದಾರೆ.

ಬದಾಮಿಯ ಶ್ರೀ ವೀರಪುಲಿಕೇಶಿ ಪದವಿ ಮಹಾವಿದ್ಯಾಲಯದಲ್ಲಿ ಕನ್ನಡದ ಹಿರಿಯ ಪ್ರಾಧ್ಯಾಪಕರಾಗಿ ಹಾಗೂ ಕನ್ನಡ ವಿಶ್ವವಿದ್ಯಾಲಯ ಹಂಪೆಯ ಸಂಶೋಧನಾ ಮಾರ್ಗದರ್ಶಕರು, ವಿಶ್ರಾಂತ ಪ್ರಾಧ್ಯಾಪಕರಾದ ಡಾ. ರಾಜಶೇಖರ ಬಸುಪಟ್ಟದರವರು ಕವಿವರ್ಯರಾದ ತಮ್ಮ ತಂದೆಯವರ ಹಾದಿಯಲ್ಲಿಯೇ ಮುನ್ನಡೆಯುತ್ತಾ, ನಿನ್ನೆ ನಾಳೆಗಳ ಮಧ್ಯೆ ( ಕವನ ಸಂಕಲನ ) 2006, ಚಿತ್ತರಗಿ–ಇಳಕಲ್ಲ ಶ್ರೀ ವಿಜಯಮಹಾಂತೇಶ್ವರ

ಸಂಸ್ಥಾನಮಠ: ಒಂದು ಸಾಂಸ್ಕೃತಿಕ ಅಧ್ಯಯನ, 2005 ಹಾಗೂ 2012, ವಚನ ಸಾಹಿತ್ಯ –ಪ್ರಗತಿಪರ ಸಾಹಿತ್ಯ (ವಿಮರ್ಶೆ) 2009, ಮಡಿವಾಳಪ್ಪ ಪಟ್ಟಣಶೆಟ್ಟಿ (ಜೀವನ ಚರಿತ್ರೆ ) 2014, ಗುಳೇದಗುಡ್ಡ ಪರಿಸರದ ಮಠಗಳು : ಒಂದು ಸಾಂಸ್ಕೃತಿಕ ಅಧ್ಯಯನ ( ಸಂಶೋಧನೆ) 2018, ನೆಲದೊಡಲಿನ ಸಿರಿ (ಸಂಶೋಧನಾ ಲೇಖನಗಳು) 2019, ವಿವೇಕ ಚಿಂತಾಮಣಿ (ಆಧ್ಯಾತ್ಮಿಕ ವಿಮರ್ಶಾ ಚಿಂತನೆಗಳು) 2023, 'ಬಯಲ ಬೆರಗು' ವಿಮರ್ಶಾ ಲೇಖನಗಳ ಸಂಕಲನ 2023, ಮುದುಕಪ್ಪ ಕಲಬುರ್ಗಿ (ಜೀವನ ಚರಿತ್ರೆ), ಡಾ. ಎಸ್.ಎಸ್. ಬಸುಪಟ್ಟದ (ಜೀವನ ಚರಿತ್ರೆ). ಸಹಕಾರ ಸಂಪದ – 1995, ಶರಣ ಸಂಗಮ – 1997, ಚಾಲುಕ್ಯ ಸೌರಭ – 2004, ಮುದ್ರಣ ಸುವರ್ಣ –2008, ಪುಷ್ಪಗಿರಿ –2009, ಕಲ್ಲೋಜ – 2015, ಶತಸಿರಿ –2018, ಸಾಹಿತ್ಯ ಸ್ಪಂದನ : ಬಿಕಾಂ 1ನೇ ಸೆಮಿಸ್ಟರ್ ಪಠ್ಯಪುಸ್ತಕ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ –2016–2020, ದಾರಿಯ ಬುತ್ತಿ : ಬಿಎಸ್ಸಿ 3ನೇ ಸೆಮಿಸ್ಟರ್ ಪಠ್ಯಪುಸ್ತಕ ,ರಾ.ಚ.ವಿ.ವಿ. ಬೆಳಗಾವಿ, 2022 ರಿಂದ 2025 ಇತ್ಯಾದಿ ಸಂಪಾದನಾ ಕೃತಿಗಳನ್ನು ಸೇರಿದಂತೆ ಹಲವಾರು ಕೃತಿಗಳನ್ನು ರಚಿಸಿ ಸಂಶೋಧಕರಾಗಿ, ವಿಮರ್ಶಕರಾಗಿ ಸಲ್ಲಿಸುತ್ತಿರುವ ನಿರಂತರವಾದ ಮೌಲಿಕ ಸೇವೆ ಅನುಪಮವಾದುದು. ಇವರು 'ಚಿತ್ತರಗಿ– ಇಳಕಲ್ಲ ಶ್ರೀ ವಿಜಯಮಹಾಂತೇಶ್ವರ ಸಂಸ್ಥಾನಮಠ ; ಒಂದು ಸಾಂಸ್ಕೃತಿಕ ಅಧ್ಯಯನ' ಎಂಬ ವಿಷಯದ ಮೇಲೆ ಮಹಾಪ್ರಬಂಧವನ್ನು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡಕ್ಕೆ ಸಲ್ಲಿಸಿ ಪ್ರಕಟಿಸಿದ್ದಾರೆ.

ಡಾ. ಸರ್ವೋತ್ತಮ ವಾಯ್. ಅಂಬೇಕರ ಅವರು ವಿಜ್ಞಾನ ಸಾಹಿತ್ಯದಲ್ಲಿ ಮೌಲಿಕ ಕೃಷಿಗೈದು ಗುಳೇದಗುಡ್ಡದ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಅವರ ಸಂಕ್ಷಿಪ್ತ ರಸಾಯನ ವಿಜ್ಞಾನ ಚರಿತ್ರೆ, ಕಾರ್ಬನ್, 'ಪರಮಾಣು ಅಣು' ಎಂಬ ಕೃತಿಗಳನ್ನು ಕನ್ನಡ ವಿಜ್ಞಾನ ಸಾಹಿತ್ಯ ಲೋಕಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಮೋಡಿಲಿಪಿ ತಜ್ಞರಾಗಿ, ಸಂಶೋಧಕರಾಗಿ, ಇತಿಹಾಸಕಾರರಾಗಿ ತಮ್ಮದೇ ಛಾಪನ್ನು ಮುಡಿಸಿರುವ ಡಾ. ಸಂಗಮೇಶ ಕಲ್ಯಾಣಿಯವರು ಶರಣ ಉತ್ತೂರ ಬಸಯ್ಯ ಅಜ್ಜನವರ ಚರಿತ್ರೆ, ಜ್ಯೋತಿರ್ಲಿಂಗ ದರ್ಶನ, ಚೆಲ್ಲಿದರು ಮಲ್ಲಿಗೆಯ, ಕರ್ನಾಟಕ ಏಕೀಕರಣದ ನೆನಪು, ಮೋಡಿಲಿಪಿ ಸಂಶೋಧನಾ ಮಾರ್ಗ, ಮೋಡಿ ಲಿಪಿ ಕಥಾಮಂಜರಿ, ಮೋಡಿಲಿಪಿ ಚಾರಿತ್ರಿಕ ಮಹತ್ವ, ಕಲ್ಯಾಣಿ ಮೋಡಿ ಕಲಿಕೆ, ತೇರಿದಾಳ 12, ಮೋಡಿ ದಾಖಲೆಯಲ್ಲಿ ಕಿತ್ತೂರು, ಬದಾಮಿ ಕಪ್ಪೆ ಅರಭಟ್ಟನ ಶಾಸನ ಮರುಓದು ಹೀಗೆ ಅನೇಕ ಮೌಲಿಕ ಕೃತಿಗಳನ್ನು ರಚಿಸಿ ನಾಡಿನ ಐತಿಹಾಸಿಕ ಪರಂಪರೆಗೆ ಸಂಶೋಧನೆಯ ಕೊಡುಗೆಯನ್ನು ನೀಡಿದ್ದಾರೆ. ವಿಶ್ರಾಂತ ಕನ್ನಡ ಪ್ರಾಧ್ಯಾಪಕರಾಗಿರುವ ಶ್ರೀ ಎಂ. ಪಿ. ನೀಲಕಂಠಮಠ ರವರು 'ಶ್ರೀ ನೀಲಕಂಠ ಮಲ್ಲಿಕಾರ್ಜುನ ಪುರಾಣ' ಗ್ರಂಥವನ್ನು ಸಂಪಾದಿಸಿರುವುದಲ್ಲದೇ 'ಗುಳೇದಗುಡ್ಡದ ಕುರುಹಿನಶೆಟ್ಟಿ ಹವ್ಯಾಸಿ ಕಲಾವಿದರು' ಎಂಬ ಕೃತಿಯನ್ನು ರಚಿಸಿದ್ದಾರೆ. ಗುಳೇದಗುಡ್ಡ ತಾಲೂಕಿನ ಐದನೇ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿರುವ ಪ್ರೊ. ಸಿದ್ಧಲಿಂಗಪ್ಪ ಬರಗುಂಡಿಯವರು ಬಸವಕೇಂದ್ರದ ಅಧ್ಯಕ್ಷರಾಗಿ, ಉಪನ್ಯಾಸಕರಾಗಿ ಮೌಲಿಕ ಸೇವೆ ಸಲ್ಲಿಸುತ್ತಲೇ ಹಲವಾರು ಸಾಹಿತ್ಯ ಕೃತಿಗಳನ್ನು ರಚಿಸಿ ನವಪೀಳಿಗೆಯ ಬರಹಗಾರರಿಗೆ ಮಾದರಿಯಾಗಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಬಾಗಲಕೋಟೆ ಜಿಲ್ಲಾ ಘಟಕದ ಪ್ರಸ್ತುತ ಕೋಶಾಧ್ಯಕ್ಷರಾಗಿ ಸಾಹಿತ್ಯ ಹಾಗೂ ಸಂಘಟನೆಯಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿರುವ ಪ್ರೊ. ಸಿ.ಎಂ. ಜೋಶಿಯವರು ಗೊಂದಲಿಗರು, ಸ್ವಾತಂತ್ರ್ಯ ಹೋರಾಟಗಾರರು ಸೇರಿದಂತೆ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಡಾ. ಎಚ್.ಎಸ್. ಘಂಟಿಯವರು 'ಹೆತ್ತವರ ಜೊತೆ ಹತ್ತಾರು ಕವಿತೆ', 'ಬಾಡದ ಹೂವು', 'ತಲ್ಲಣಸದಿರು ಕಂಡ್ಯ ತಾಳು ಮನವೇ' ಸೇರಿದಂತೆ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಹಿಂದಿನ ಗುಳೇದಗುಡ್ಡ ತಾಲೂಕಿನ ನಾಲ್ಕನೇ ಸಾಹಿತ್ಯ ಸಮ್ಮೇಳನದ

ಸರ್ವಾಧ್ಯಕ್ಷರಾಗಿದ್ದ ಡಾ. ಎಂ. ಪಿ. ಹುಗ್ಗಿಯವರು ಆಧುನಿಕ ವಚನಕಾರರಾಗಿ ಸಲ್ಲಿಸಿದ ಸೇವೆ ಅನುಪಮವಾದುದು. ಸಾವಿರಾರು ವಚನಗಳನ್ನು ರಚಿಸುವುದರ ಮೂಲಕ ಕನ್ನಡ ಆಧುನಿಕ ವಚನ ಸಾಹಿತ್ಯಕ್ಕೆ ಮೌಲಿಕ ಕೊಡುಗೆಯನ್ನು ನೀಡಿದ್ದಾರೆ. ಗುಳೇದಗುಡ್ಡದ ಭಂಡಾರಿ ಪದವಿ ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವ ಸಾಹಿತಿಗಳಾದ ಡಾ. ಸಣ್ಣವೀರಣ್ಣ ದೊಡಮನಿಯವರು 'ಶಿಳ್ಳೆಕ್ಯಾತರು ಒಂದು ಜನಪದೀಯ ಅಧ್ಯಯನ' ಸಂಶೋಧನಾ ಮಹಾಪ್ರಬಂಧವಾಗಿದೆ. ಇವರು ಸಾಹಿತ್ಯ ಮನನ-1, 2, 3 ಎಂಬ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಬಿ.ಎಸ್.ಸಿ. ಪದವಿ ವಿಭಾಗದ ಪಠ್ಯ ಕೃತಿಗಳನ್ನು ಸಂಪಾದಿಸಿದ್ದಾರೆ. ಬಾಗಲಕೋಟೆ ಜಿಲ್ಲೆಯ ದಲಿತ ಕಾವ್ಯ ಇವರ ಮತ್ತೊಂದು ಸಂಪಾದಿತ ಕಾವ್ಯ ಸಂಕಲನ, ಅರಿವು ಆಚಾರ ಅನುಭಾವ-ವಿಮರ್ಶಾ ಸಂಕಲನ ಇದಲ್ಲದೇ ಹಲವಾರು ಸಂಶೋಧನೆ ಹಾಗೂ ವಿಮರ್ಶಾ ಬರಹಗಳು ನಾಡಿನ ಪ್ರತಿಷ್ಠಿತ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.

ಪ್ರೊ. ಎಸ್. ಐ. ರಾಜನಾಳ ರವರು ಕೃತಿ ರಚನೆ ಹಾಗೂ ಆಧ್ಯಾತ್ಮಿಕ ಉಪನ್ಯಾಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಗುಳೇದಗುಡ್ಡದ ಶಾಸ್ತ್ರ ಪರಂಪರೆಯನ್ನು ಮುನ್ನಡೆಸುತ್ತಿದ್ದಾರೆ. ಡಾ. ಪ್ರಕಾಶ ಎನ್. ನರಗುಂದರವರು 'ಶಿಕ್ಷಣ ಶಿಲ್ಪಿ ಶ್ರೀ ಎನ್. ಎಸ್. ಪೋಲೇಶಿ' ಎಂಬ ಅಭಿನಂದನಾ ಗ್ರಂಥ, 'ಬಿತ್ತಿದ ಬೀಜ' ಸೇರಿದಂತೆ ವಿಮರ್ಶೆ, ಸಂಶೋಧನೆ, ಸಂಪಾದನೆ, ಕಾವ್ಯ ಕಥೆ ಇತ್ಯಾದಿ ಪ್ರಕಾರಗಳಲ್ಲಿ ಸಾಹಿತ್ಯ ಕೃಷಿಯನ್ನು ಕೈಗೊಂಡಿದ್ದಾರೆ. ಚಿದಾನಂದಸಾ ಕಾಟವಾರವರು 'ಕಿರಿಯನ ಮಾತು' ಎಂಬ ಕೃತಿಯನ್ನೊಳಗೊಂಡಂತೆ ಸಾಹಿತ್ಯ ಸಂಗೀತ ಹಾಗೂ ಪ್ರವಚನಗಳ ಮೂಲಕ ಆಧ್ಯಾತ್ಮಿಕ ಕ್ಷೇತ್ರಕ್ಕೆ ತಮ್ಮದೇ ಕೊಡುಗೆಯನ್ನು ನೀಡುತ್ತಿದ್ದಾರೆ. ಕೊಂಕಣಕೊಪ್ಪ ಗ್ರಾಮದವರಾದ ಶ್ರೀ ರವಿ ಕಂಗಳರವರು ಸದ್ಯ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಸೇವೆಯನ್ನು ಸಲ್ಲಿಸುತ್ತಿದ್ದು, ಇವರು 'ನೆನಪಿನ ಮದರಂಗಿ', 'ಕನಸುಗಳಿಗೆ ಕಸುವು ತುಂಬಿ', 'ವಚನ ರಸಾಯನ', 'ಪರಿಧಿಯೊಳಗಿನ ಕಾಯಕ', 'ತೂಗುಯ್ಯಾಲೆ' ಮುಂತಾದ ಕೃತಿಗಳನ್ನು ರಚಿಸಿ ತಾಲೂಕಿನ ಸಾಹಿತ್ಯ ಪರಂಪರೆಯನ್ನು ಉಜ್ವಲಗೊಳಿಸಿದ್ದಾರೆ. ಶಿವಕುಮಾರ ಕರನಂದಿಯವರು 'ಮೌನ ಮಾತಾದಾಗ', 'ನೆರಳಿಗಂಟಿದ ನೆನಪು' ಎಂಬ ಗಜಲ್ ಕಾವ್ಯ ಸಂಕಲನಗಳನ್ನು ರಚಿಸಿ ಗುಳೇದಗುಡ್ಡದ ಕಾವ್ಯ ಪರಂಪರೆಗೆ ವಿಭಿನ್ನವಾದ ಆಯಾಮವನ್ನು ನೀಡಿದ್ದಾರೆ. ಪತ್ರಕರ್ತರಾದ ಮಲ್ಲಿಕಾರ್ಜುನ ರಾಜನಾಳರವರು ಗುಳೇದಗುಡ್ಡದ ಜನಪದ ಸಂಸ್ಕೃತಿ ಹಾಗೂ ಹಿರಿಮೆಯನ್ನು ಕುರಿತು ಬರೆದ ಲೇಖನಗಳು ನಾಡಿನ ಪ್ರತಿಷ್ಠಿತ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ನನ್ನ ಬರಹವೆಂಬ ನಿತ್ಯಧ್ಯಾನ, ಭಾವದೊಳಗಿನ ನಿರ್ಭಾವ ಹಾಗೂ ಭೌತವಾದ, 'ಪುಷ್ಪರಗಳೆ' ಲಲಿತ ಪ್ರಬಂಧ ಸಂಕಲನ, 'ಪೀಠಾಧಿಪತಿ' ಎಂಬ ಕೃತಿಗಳು ತಾಲೂಕಿನ ಸಾಹಿತ್ಯ ಪರಂಪರೆಯ ಭಾಗವೇ ಆಗಿರುವುದು ಭಾಗ್ಯವೆನಿಸಿದೆ. ಸದ್ಯ ಗುಳೇದಗುಡ್ಡದ ಮೂಕೇಶ್ವರಿ ನಗರದ ಹಿರಿಯ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರಾಗಿ ಸೇವೆಯನ್ನು ಸಲ್ಲಿಸುತ್ತಿರುವ ಸಂಶೋಧಕರಾದ ಶ್ರೀ ಎಸ್. ಬಿ. ಮೆಣಸಿನಕಾಯಿಯವರು ಪ್ರೇಮ, ಬಾನಂಗಳ ಬಳ್ಳಿ, ಕಾವ್ಯ ಕುಸುಮ, ಸೂಳೇಭಾವಿ ಗ್ರಾಮ : ಒಂದು ಸಾಂಸ್ಕೃತಿಕ ಅಧ್ಯಯನ ಎಂಬ ಮುಂತಾದ ಕೃತಿಗಳನ್ನು ಕನ್ನಡ ಸರಸ್ವತಿಯ ಮುಡಿಗೇರಿಸಿ ಆನಂದಿಸಿದ್ದಾರೆ. ವೈದ್ಯರು ಹಾಗೂ ವಕೀಲರಾಗಿ ಹೆಸರಾಗಿರುವ ಶ್ರೀ ವೀರಭದ್ರಪ್ಪ ಬೆಕಿನಾಳರವರು 'ಕಾಲದ ಜೊತೆಗಿನ ಹೆಜ್ಜೆಗಳು' ಎಂಬ ಆತ್ಮಕಥನವನ್ನು ರಚಿಸಿದ್ದಾರೆ. ಶ್ರೀ ಸಂಗಮೇಶ ಮೆಗೆಣ್ಣಿಯವರು ಭಾವಪೂರ್ಣ ಕೃತಿಯನ್ನು ರಚಿಸಿ ಗುಳೇದಗುಡ್ಡದ ಸಾಹಿತ್ಯ ಲೋಕಕ್ಕೆ ಪ್ರವೇಶವನ್ನು ಪಡೆದಿದ್ದಾರೆ.

ಶ್ರೀ ಶಿವಪುತ್ರಪ್ಪ ಹಟ್ಟಿಯವರು ಅನುಭವಾಮೃತ ದರ್ಶನ ದಾರ್ಶನಿಕ ಕೃತಿಯನ್ನು ರಚಿಸಿ ಗುಳೇದಗುಡ್ಡ ತಾಲೂಕಿನ ಆಧ್ಯಾತ್ಮಿಕ ಕ್ಷೇತ್ರಕ್ಕೆ ಮಹತ್ವದ ಕೊಡುಗೆಯನ್ನು ನೀಡಿದ್ದಾರೆ.

ಡಾ. ಸಂಗಯ್ಯ ಸರಗಣಾಚಾರಿಯವರು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಇಲ್ಲಿಗೆ ಸಲ್ಲಿಸಿದ 'ಬಾಗಲಕೋಟೆ ಜಿಲ್ಲೆಯ ನೇಕಾರಿಕೆ' ಎಂಬ ತಮ್ಮ ಪಿ.ಎಚ್.ಡಿ. ಮಹಾಪ್ರಬಂಧವನ್ನು ಪ್ರಕಟಿಸುವುದರ ಮೂಲಕ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿದ್ದಾರೆ. ಡಾ. ಪರಮೇಶ್ವರಿ ಹಿರೇಮಠ ಅವರು ತಮ್ಮ ತಂದೆಯವರ ವಾರ್ಷಿಕ ಪುಣ್ಯಾರಾಧನೆಯ ನಿಮಿತ್ತ 'ಶ್ರೀ ರೇಣುಕ ಪ್ರಿಯ' ಎಂಬ ಗ್ರಂಥವನ್ನು ಸಂಪಾದಿಸಿ ಪ್ರಕಟಿಸಿರುವುದು ಗುಳೇದಗುಡ್ಡದ ಧಾರ್ಮಿಕ ಸಾಹಿತ್ಯ ಪರಂಪರೆಗೆ ಮತ್ತೊಂದು ಕೊಡುಗೆಯಾಗಿದೆ. ಡಾ. ಸಂತೋಷ ಕಾಳನ್ನವರ ರವರು ಕನ್ನಡ ವಿಶ್ವವಿದ್ಯಾಲಯ ಹಂಪೆ ಇಲ್ಲಿಗೆ ಸಲ್ಲಿಸಿದ ತಮ್ಮ ಪಿ.ಎಚ್.ಡಿ. ಮಹಾಪ್ರಬಂಧವಾಗಿರುವ ಮಳೆಯಪ್ಪಯ್ಯನ ಮಠ ಸಾಂಸ್ಕೃತಿಕ ಅಧ್ಯಯನ ಕೃತಿಯನ್ನು ಪ್ರಕಟಿಸಿ ಸಂಶೋಧಕರಾಗಿ ಗುರ್ತಿಸಿಕೊಂಡಿದ್ದಾರೆ. ವಿಶ್ರಾಂತ ಕನ್ನಡ ಪ್ರಾಧ್ಯಾಪಕರಾಗಿರುವ ಶ್ರೀ ಎಂ. ಪಿ. ನೀಲಕಂಠಮಠ ರವರು 'ಶ್ರೀ ನೀಲಕಂಠೇಶ್ವರ ಪುರಾಣ' ಗ್ರಂಥವನ್ನು ಸಂಪಾದಿಸಿರುವುದಲ್ಲದೇ 'ಗುಳೇದಗುಡ್ಡದ ಕಲಾವಿದರು' ಎಂಬ ಕೃತಿಯನ್ನು ರಚಿಸಿದ್ದಾರೆ. ಶ್ರೀಮತಿ ಭಾಗೀರಥಿ ಆಲೂರ ರವರು ತಮ್ಮ ಚೊಚ್ಚಲ ಕವನಸಂಕಲನವಾದ 'ನೆನಪಿನಂಗಳ' ಹಾಗೂ ಶ್ರೀಮತಿ ಅನ್ನಪೂರ್ಣ ಬೆಕಿನಾಳರವರು 'ಸೌಗಂಧ' ಕವನಸಂಕಲನ ರಚಿಸಿ ಗುಳೇದಗುಡ್ಡ ತಾಲೂಕಿನ ಭರವಸೆಯ ಕವಯಿತ್ರಿಯರಾಗಿ ಹೊರಹೊಮ್ಮಿದ್ದಾರೆ. ಗುಳೇದಗುಡ್ಡದ ವಕೀಲರಾದ ಶ್ರೀ ರಾಯಚೂರು ರವರು ಕೂಡ ಕವನಸಂಕಲನವನ್ನು ಪ್ರಕಟಿಸಿ ಸಾಹಿತ್ಯಲೋಕವನ್ನು ಶ್ರೀಮಂತಗೊಳಿಸಿರುವುದು ವಿಶೇಷವಾಗಿದೆ. ಶ್ರೀ ಮಹಾಂತೇಶ ಕಾತರಕಿಯವರು ಎಂದಿಗೂ ಮಾಸದ ಜೇನು ಎಂಬ ಕವನಸಂಕಲನ ರಚಿಸಿ ಪ್ರಕಟಿಸಿರುವುದು ವಿಶೇಷವಾಗಿದೆ. ವೈದ್ಯಕೀಯ ಲೋಕದ ವೃತ್ತಿಯಲ್ಲಿದ್ದರೂ ಸಾಹಿತ್ಯಾರಾಧನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

**ರಂಗಸಾಹಿತ್ಯ:**

'ಕರ್ನಾಟಕದ ಶೇಕ್ಸ್‌ಪಿಯರ್', 'ನಾಟ್ಯ ಕವಿಕೇಸರಿ' ಎಂದೇ ಬಿರುದಾಂಕಿತರಾದ ದಿ. ಕಂದಗಲ್ಲ ಹನಮಂತರಾಯರ ಜನ್ಮಭೂಮಿ ಬೀಳಗಿ ತಾಲೂಕಿನ ಕಂದಗಲ್ಲ ಆದರೆ ಅವರ ಕರ್ಮಭೂಮಿ ಗುಳೇದಗುಡ್ಡವಾಗಿತ್ತು. ನಾಡಿನಲ್ಲಿಯೇ ಅಪರೂಪದ ರಂಗಪರಂಪರೆಯ ತವರೂರು ಎಂದೇ ಪ್ರಸಿದ್ಧಿಯನ್ನು ಪಡೆದಿರುವ ಗುಳೇದಗುಡ್ಡವು ವೃತ್ತಿ ಹಾಗೂ ಹವ್ಯಾಸಿ ರಂಗಭೂಮಿಗಳೆರಡನ್ನೂ ಪೋಷಿಸಿ ಬೆಳೆಸಿದ ಹಿರಿಮೆಯನ್ನು ಹೊಂದಿದೆ. ಇಂತಹ ಶ್ರೀಮಂತ ರಂಗಪರಂಪರೆಗೆ ಕಾರಣರಾದ ದಿ. ಕಂದಗಲ್ಲ ಹನಮಂತರಾಯರು ಒಟ್ಟು 14 ಪೌರಾಣಿಕ ನಾಟಕಗಳು, 7 ಏಕಾಂಕಗಳನ್ನು, 4 ಐತಿಹಾಸಿಕ ನಾಟಕಗಳನ್ನು, 12 ಸಾಮಾಜಿಕ ನಾಟಕಗಳನ್ನು ರಚಿಸಿರುವುದು ಅವರ ದೈತ್ಯ ನಾಟ್ಯಪ್ರತಿಭೆಗೆ ಹಿಡಿದ ಕೈಗನ್ನಡಿಯಾಗಿದೆ. ಅವರ ರಕ್ತರಾತ್ರಿ, ಬಡತನದ ಭೂತ, ಕುರುಕ್ಷೇತ್ರ, ದೈವದುರಂತ ಕರ್ಣ, ಮಾತಂಗ ಕನ್ಯೆ ಇವು ಹನಮಂತರಾಯರ ಜನಪ್ರಿಯ ನಾಟಕಗಳು. ನಟರಾದ ಶ್ರೀ ಎಚ್. ಆರ್. ಭಸ್ಮೆಯವರು ತುಂಬಾ ಶ್ರೀಮಂತ ಮನೆತನದಿಂದ ಬಂದು 150 ಕ್ಕಿಂತಲೂ ಹೆಚ್ಚು ನಾಟಕಗಳನ್ನು ರಚಿಸಿ ನಾಡಿನ ಶ್ರೇಷ್ಠ ನಾಟಕಕಾರರಾಗಿ ಮನೆಮಾತಾದರು. ಅವರ ಅತ್ತೆ ಅಳಿಯ, ಮೈದುನ, ಬಾಸಿಂಗಬಲ, ಹೆಸರಿಗೆ ಮಾತ್ರ ಗಂಡ, ತಂದೆ ಮಗಳ ಗಂಡ, ಸತ್ಯ ಹರಿಶ್ಚಂದ್ರ, ಗೌಡ್ರ ಮಗಳ ಗದ್ಲ, ಇವಳೆಂಥ ಸೊಸೆ, ರಂಡೆ ಮುಂಡೆ ರಾಜ್ಯ, ಶಿವದರ್ಶನ ನಾಟಕಗಳು ಪ್ರಕಟಗೊಂಡಿದ್ದು ಜನಮನಸೂರೆಗೊಂಡು ಈಗಲೂ ಪ್ರಯೋಗಗೊಳ್ಳುತ್ತಿವೆ. ನಿಂಗೇಶ ಬುಳ್ಳಾರವರು ಛತ್ರಪತಿ ಶಿವಾಜಿ, ವೀರಪುಲಿಕೇಶಿ, ಕುಂಕುಮಭಾಗ್ಯ, 'ಶ್ರೀ ಕಾಡಸಿದ್ಧೇಶ್ವರ ಮಹಾಸ್ವಾಮಿಗಳ ಚರಿತ್ರೆ' ಸೇರಿ 11 ಮೂರಂಕಿನ ನಾಟಕಗಳನ್ನು ಹಾಗೂ 9 ಏಕಾಂಕ ನಾಟಕಗಳನ್ನು ರಚಿಸಿದ್ದಾರೆ. ಡಿ.ಆರ್. ತುಕಾರಾಂ ಅವರ ಬಾವಿ ಕಳೆದಿದೆ, ರಾಜಮಹಮ್ಮದ ಮುಲ್ಲಾರವರು ಹೆಣ್ಣು ಹುಲಿ,

ಸಿಡಿದೆದ್ದ ಸೇಡು, ದರಕಾರವಿಲ್ಲದ ಸರಕಾರ ಮೊದಲಾದ ನಾಟಕಗಳನ್ನು ರಚಿಸಿದ್ದಾರೆ. ಸಾಹಿತಿಗಳು ಹಾಗೂ ಉಪನ್ಯಾಸಕರಾಗಿರುವ ಡಾ. ಭೀಮನಗೌಡ ಪಾಟೀಲರು 'ಸುಮಂಗಲಿ ಸೌಭಾಗ್ಯ', 'ಹಿಂಗಾದ್ರ ಮುಂದ ಹ್ಯಾಂಗ', 'ರಂಗ ಪರದೆ', 'ಸೇವೆಯ ಸಂಕೋಲೆ', 'ಪ್ರೇಮಾತಿರೇಕ', 'ಕರುಳಿನ ಕಿಚ್ಚು' ಕೃತಿಗಳನ್ನು ರಚಿಸಿ ರಂಗಪರಂಪರೆಗೆ ಅಮೂಲ್ಯವಾದ ಕೊಡುಗೆಯನ್ನು ನೀಡಿದ್ದಾರೆ. ಹಿರಿಯ ಸಾಹಿತಿಗಳಾದ ಡಾ. ವಿ. ಎ. ಬೆನಕನಾಳರವರು ಕಲ್ಯಾಣವೆಂಬುದು ಮತ್ತೆಲ್ಲಿಹುದಯ್ಯ, ಶಂಕರ ನಾಮಾಂಕಿತ ಶಿವದಾಸಿಮಯ್ಯ, ವಚನಬ್ರಹ್ಮ ಜೇಡರದಾಸಿಮಯ್ಯ, ಶ್ರೀ ಕಾಡಸಿದ್ಧೇಶ್ವರ ಮಹಾತ್ಮೆ ನಾಟಕ ಕೃತಿಗಳನ್ನು ರಚಿಸುವುದರ ಮೂಲಕ ಗುಳೇದಗುಡ್ಡ ರಂಗ ಪರಂಪರೆಯನ್ನು ಶ್ರೀಮಂತಗೊಳಿಸುತ್ತಿದ್ದಾರೆ. ಇವರಿಂದ ಪ್ರೇರಣೆಗೊಂಡ ನಾನು ಪೀಠಾಧಿಪತಿ ಎಂಬ ನಾಟಕವನ್ನು ರಚಿಸಿದ್ದೇನೆ.

**ಪರಾಮರ್ಶನ ಗ್ರಂಥಗಳು:**


1. ಗುಳೇದಗುಡ್ಡ ಪರಿಸರದ ಮಠಗಳು – ಡಾ. ರಾಜಶೇಖರ ಬಸುಪಟ್ಟದ
2. ನೆಲದೊಡಲ ಸಿರಿ – ಡಾ. ರಾಜಶೇಖರ ಬಸುಪಟ್ಟದ
3. ಗುಳೆ – ಸ್ಮರಣ ಸಂಚಿಕೆ – ಪ್ರ.ಸಂಪಾದಕರು– ಸಿ.ಎಂ. ಜೋಶಿ
4. ಎಸ್. ಎಸ್. ಬಸುಪಟ್ಟದ – ಶ್ರೀ ಅಬ್ಬಾಸ್ ಮೇಲಿನಮನಿ
5. ಗುಳೇದಗುಡ್ಡದ ಒಪ್ಪತ್ತೇಶ್ವರ ಮಠದ ಪರಂಪರೆ – ಶ್ರೀ ಹನಮಂತಪ್ಪ ರಂಗಾಪೂರ
6. ಅಭಿನವ ಒಪ್ಪತ್ತೇಶ್ವರ ಶ್ರೀಗಳ ಜೀವನ ಮತ್ತು ಸಾಧನೆ – ಶ್ರೀ ಹನಮಂತಪ್ಪ ರಂಗಾಪೂರ
7. ಕ್ಯಾದಗಿ – ಡಾ. ಮಹಾದೇವ ಕಣವಿಯವರ ಅಭಿನಂದನಾ ಗ್ರಂಥ – ಸಂ. ಶ್ರೀರಾಮ ಇಟ್ಟಣ್ಣವರ
8. ಹಮ್ಮೀರ ಕಾವ್ಯ – ಡಾ. ಎಂ. ಎಸ್. ಸುಂಕಾಪುರ



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.